ಒ ಎಸ್ ನಂ.**7091/2022**
ಪಿ.ಡಬ್ಲ್ಯೂ: **2**

**<u>ದಿನಾಂಕಃ 05.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ. ಅಶೋಕ್ ಕುಮಾರ್.ಎಂ.ಸಿ. ವಕೀಲರಿಂದಃ-</u>**

1. ನಾನು ವಾದಿಗೆ ಚಿಕ್ಕಪ್ಪ ಆಗಬೇಕು. ನಾನು ಬಿ.ಇ. ಮೆಕಾನಿಕಲ್ ಓದಿರುತ್ತೇನೆ. ನನಗೆ ಇಂಗ್ಲಿಷ್ ಓದು ಬರಹ ಬರುತ್ತದೆ. ಕನ್ನಡ ಅಲ್ಪಸ್ವಲ್ಪ ಬರುತ್ತದೆ. ಈಗ 40 ವರ್ಷಗಳ ಹಿಂದೆ ನಾನು ಮತ್ತು ವಾದಿಯ ತಂದೆ ಕೂಡಿ ವಾಸಿಸುತ್ತಿದ್ದೇವು. ನನ್ನ ಮದುವೆ ಅಕ್ಟೋಬರ್ 1976 ರಲ್ಲಿ ಆಗಿರುತ್ತದೆ. ಮದುವೆಯಾದ 02 ವರ್ಷಗಳ ನಂತರ ನಾನು ಪ್ರತ್ಯೇಕವಾಗಿ ವಾಸಿಸುತ್ತಿದ್ದೇನೆ. ನಾನು ಬೆಂಗಳೂರಿನ ಜಯನಗರ 1ನೇ ಬ್ಲಾಕ್ ನಲ್ಲಿ ವಾಸಿಸುತ್ತಿದ್ದೇನೆ.

2. ನಾನು ವಾದಿಯ ಜೊತೆ ಮಾತುಕತೆ ಮಾಡಿಕೊಂಡು ಚೆನ್ನಾಗಿದ್ದೇನೆ. ಅದೇ ರೀತಿ 1ನೇ ಪ್ರತಿವಾದಿ ಜೊತೆ ಕೂಡ ಮಾತುಕತೆ ಮಾಡಿಕೊಂಡು ಚೆನ್ನಾಗಿದ್ದೇನೆ. ನನ್ನ ಅಣ್ಣ ಅಂದರೆ ವಾದಿಯ ತಂದೆಗೆ ಆತ ತೀರಿಕೊಳ್ಳುವ ಮುಂಚೆ 10 ವರ್ಷಗಳಿಂದ ಆರೋಗ್ಯ ಸರಿ ಇರಲಿಲ್ಲ. ಆತನಿಗೆ ಹೃದಯ ಸಂಬಂದಿ ಖಾಯಿಲೆ ಇತ್ತು ಮತ್ತು ಶ್ವಾಸಕೋಶದ ತೊಂದರೆ ಇತ್ತು. ವಾದಿ ಇಂಜಿನಿಯರಿಂಗ್ ಓದಿಲ್ಲ ಎಂ.ಎಸ್‌ಸಿ ಓದಿರುತ್ತಾನೆ. ಬೆಂಗಳೂರಿನ ಹೊಸೂರು ರಸ್ತೆಯಲ್ಲಿರುವ ಅಲ್-ಅಮಿನ್ ಕಾಲೇಜಿನಲ್ಲಿ ಓದಿರುತ್ತಾನೆ. ವಾದಿ ನೆಲಮಂಗಲದಲ್ಲಿ ಇಂಟರನ್ ಶಿಪ್ ಮಾಡಿರುವುದು ನನಗೆ ಗೊತ್ತಿಲ್ಲ. 2013 ರಲ್ಲಿ ವಾದಿ ನೆಲಮಂಗದಲ್ಲಿ ವಾಸಿಸುತ್ತಿದ್ದನು ಎನ್ನುವುದು ನನಗೆ ಗೊತ್ತಿಲ್ಲ. ವಾದಿ ಎಂ.ಎಸ್‌ಸಿ ಓದುವಾಗ ಆತನ ಖರ್ಚು ವೆಚ್ಚಗಳನ್ನು ಆತನ ತಂದೆ ತಾಯಿ ನೋಡಿಕೊಳ್ಳುತ್ತಿದ್ದರು. ವಾದಿ ಟ್ಯೂಷನ್ ಕ್ಲಾಸ್ ನಡೆಸುವುದು ಮತ್ತು ಕಾಲೇಜಿನಲ್ಲಿ ಉಪನ್ಯಾಸಕನಾಗಿ ಕೆಲಸ ಮಾಡುತ್ತಿದ್ದನು. ಪಾರ್ಟ್ ಟೈಮ್ ನಲ್ಲಿ ಟ್ಯೂಷನ್ ಕ್ಲಾಸ್ ನಡೆಸುತ್ತಿದ್ದನು ಎನ್ನುವುದು ನಿಜ.

3. ವಾದಿಯ ತಂದೆಗೆ ದಾವಾ ಆಸ್ತಿ ಹೊರತುಪಡಿಸಿ ಕೆ.ಆರ್. ಮಾರ್ಕೆಟ್ ನಲ್ಲಿ ಒಂದು ಆಸ್ತಿ ಇತ್ತು ಎಂದರೆ ಸಾಕ್ಷಿ ಒಂದು ಅಂಗಡಿ ಇತ್ತು ಎನ್ನುತ್ತಾರೆ. ಅದು ಶಾಪ್ ನಂ.101, ಕೆ.ಆರ್. ಮಾರ್ಕೆಟ್ ಕಾಂಪ್ಲೆಕ್ಸ್, 1 ನೇ ಮಹಡಿ, ಕೆ.ಆರ್. ಮಾರ್ಕೆಟ್, ಬೆಂಗಳೂರು ಆಗಿದೆ ಎನ್ನುವುದು ನಿಜ. ಈ ಅಂಗಡಿಯನ್ನು ವಾದಿಯ ತಂದೆ ಮಾರಾಟ ಮಾಡಿದ್ದಾನೆ. ವಾದಿ ಎಷ್ಟು ಮಕ್ಕಳಿಗೆ ಟ್ಯೂಷನ್ ಹೇಳಿ ಕೊಡುತ್ತಿದ್ದ ಎಂದು ನನಗೆ ಗೊತ್ತಿಲ್ಲ. ವಾದಿ ಟ್ಯೂಷನ್ ಕ್ಲಾಸ್ ನಡೆಸುವಾಗ ಆ ಮಕ್ಕಳಿಗೆ ಪಾಸ್ ಮಾಡಿಸಿಕೊಡುತ್ತೇನೆ ಎಂದು ಅವರಿಂದ ಹಣ ಪಡೆದು ಮೋಸ ಮಾಡಿದ್ದಾನೆ ಎನ್ನುವುದು ಸರಿಯಲ್ಲ. ಆಗ ಆ ಮಕ್ಕಳು ಮತ್ತು ಅವರ ಪೋಷಕರು ವಾದಿಯ ಮೇಲೆ ಪೊಲೀಸರಿಗೆ ದೂರು ಕೊಡಲು ಹೋದಾಗ ಕೆ.ಆರ್. ಮಾರ್ಕೆಟ್ ನಲ್ಲಿರುವ ಅಂಗಡಿಯನ್ನು ವಾದಿಯ ತಂದೆ ಮಾರಾಟ ಮಾಡಿ ಆ ಸಮಸ್ಯೆಯನ್ನು ಬಗೆಹರಿಸಿದ್ದಾರೆ ಎನ್ನುವುದು ಸರಿಯಲ್ಲ. ವಾದಿಯ ಮೇಲೆ ಪೊಲೀಸರಿಗೆ ದೂರು ಕೊಡಲು ಹೋಗಿದ್ದು ಮತ್ತು ಆ ಕಾಲಕ್ಕೆ ವಾದಿಯ ತಂದೆ ಸದರಿ ಸಮಸ್ಯೆಯನ್ನು ಸರಿಪಡಿಸಲು ಅಂಗಡಿಯನ್ನು ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಿದೆ ಎನ್ನುವುದು ಸರಿಯಲ್ಲ.

4. 1 ನೇ ಪ್ರತಿವಾದಿ ಇಲ್ಲಿಯವರೆಗೆ ಮದುವೆ ಆಗಿದ್ದಾಳೋ ಇಲ್ಲವೋ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಕಳೆದ 03 ವರ್ಷಗಳಿಂದ ನನಗೆ ಗೊತ್ತಿಲ್ಲ. ಅದರ ಮುಂಚೆ ಮದುವೆ ಆಗಿರಲಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿಗೆ ನಾನು ಹಣಕಾಸಿನ ಸಹಾಯ ಮಾಡುತ್ತೇನೆ ಮದುವೆ ಮಾಡಿಕೋ ಎಂದು ಹೇಳಿದ್ದೆ.

5. ನಿ.ಡಿ-1 ದಾನ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ನಿ.ಡಿ-1 ರ ಷೆಡ್ಯೂಲ್ ನಲ್ಲಿ ಕಾಣಿಸಿರುವ ಆಸ್ತಿ ವಾದಿಯ ತಂದೆಗೆ ಸೇರಿದ್ದು ಎನ್ನುವುದು ನಿಜ. ಸಾಕ್ಷಿ ಮುಂದುವರೆದು ಅದನ್ನು ನನ್ನ ತಾಯಿ ಆತನಿಗೆ ಕೊಟ್ಟಿದ್ದರು ಎನ್ನುತ್ತಾರೆ. ದಾವ ಷೆಡ್ಯೂಲ್ ಬಿ ಆಸ್ತಿಯನ್ನು ವಾದಿಯ ತಂದೆ 1 ನೇ ಪ್ರತಿವಾದಿಗೆ ದಾನವಾಗಿ ಕೊಟ್ಟಿದ್ದಾನೆ ಎನ್ನುವುದು ಗೊತ್ತಿಲ್ಲ. ನಿ.ಡಿ-1 ರಲ್ಲಿ 2 ನೇ ಪ್ರತಿವಾದಿ ಸಹಿ ಮಾಡಿದ್ದಾಳೆ ಎನ್ನುವುದು ನನಗೆ ಗೊತ್ತಿಲ್ಲ. ನಿ.ಡಿ-1 ರಲ್ಲಿ ದಾನ ಕೊಟ್ಟವರು ರೆಹಮಾನ್ ಖಾನ್ ಇವರು ನನ್ನ ಅಣ್ಣ ಎನ್ನುವುದು ನಿಜ.

ಸಾಕ್ಷಿ ಮುಂದುವರೆದು ನಿ.ಡಿ-1 ರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಅಣ್ಣನಿಗೆ ಹೃದಯ ಸಂಬಂದಿ ಖಾಯಿಲೆ ಇದ್ದರೂ ಕೂಡ ಆತನಿಗೆ ತಿಳುವಳಿಕೆ ಸರಿಯಾಗಿ ಇತ್ತು ಎನ್ನುವುದು ಸರಿಯಲ್ಲ. ಆತ ಯಾವಾಗಲೂ ಸುಸ್ತಾಗಿ ಹಾಸಿಗೆಯಲ್ಲಿ ಇರುತ್ತಿದ್ದನು. ನನ್ನ ಅಣ್ಣ ಅಂದರೆ ವಾದಿಯ ತಂದೆ ಆಸ್ಪತ್ರೆಯಲ್ಲಿದ್ದಾಗ ನಾನು ಹೋಗಿ ನೋಡಿಕೊಳ್ಳುತ್ತಿದ್ದೆನು. ನನ್ನ ಅಣ್ಣ 2019 ರಲ್ಲಿ ತೀರಿಕೊಂಡಿರಬಹುದು ಆದರೆ ನಿಖರ ದಿನಾಂಕ ನನಗೆ ಗೊತ್ತಿಲ್ಲ. ಆತ ಮನೆಯಲ್ಲಿ ತೀರಿಕೊಂಡನು.

6. ನನ್ನ ಅಣ್ಣ ಮಾನಸಿಕವಾಗಿ ಸ್ವಸ್ತ ಆಗಿದ್ದಾಗಲೇ ದಾವಾ ಷೆಡ್ಯೂಲ್ ಎ ಮತ್ತು ಬಿ ಆಸ್ತಿಗಳನ್ನು 1 ನೇ ಪ್ರತಿವಾದಿಗೆ ದಾನ ಪತ್ರ ಮಾಡಿಕೊಟ್ಟಿದ್ದಾನೆ ಎನ್ನುವುದು ಸರಿಯಲ್ಲ. ದಾವಾ ಆಸ್ತಿಗಳನ್ನು ಮಾರಾಟ ಮಾಡುವಂತೆ ನಾನು 1 ನೇ ಪ್ರತಿವಾದಿಗೆ ಒತ್ತಾಯ ಮಾಡಿರುವುದಿಲ್ಲ. ನನ್ನ ಅಣ್ಣ ಬದುಕಿದ್ದಾಗಲೇ ನಾನು 1 ನೇ ಪ್ರತಿವಾದಿಗೆ ಹಲವಾರು ಬಾರಿ ಫೋನ್ ಮಾಡಿ ದಾವಾ ಆಸ್ತಿಗಳನ್ನು ಮಾರಾಟ ಮಾಡುವಂತೆ ಒತ್ತಾಯಪಡಿಸಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಆಸ್ತಿಯ 30 ಅಡಿ ಅಂತರದಲ್ಲಿ ನನ್ನ ಬೇರಿಂಗ್ ಮತ್ತು ಬಿಡಿಭಾಗಗಳ ಅಂಗಡಿ ಇಟ್ಟುಕೊಂಡಿದ್ದೇನೆ. ಸದರಿ ಅಂಗಡಿಯನ್ನು ಕಳೆದ 35 ವರ್ಷಗಳಿಂದ ನಡೆಸುತ್ತಿದ್ದೇನೆ. ದಾವಾ ಆಸ್ತಿಗಳನ್ನು ಮಾರಾಟ ಮಾಡಿ ನಮಗೆ ಕೊಡು ಎಂದು 1 ನೇ ಪ್ರತಿವಾದಿಗೆ ಒತ್ತಾಯ ಮಾಡಿದ್ದೇನೆ ಎನ್ನುವುದು ಸರಿಯಲ್ಲ. 2-3 ಬಾರಿ ಆಸ್ತಿ ಖರೀದಿದಾರರನ್ನು ಕರೆದುಕೊಂಡು 1 ನೇ ಪ್ರತಿವಾದಿಗೆ ಬೇಟಿ ಮಾಡಿಸಿದ್ದೇನೆ ಎನ್ನುವುದು ಸರಿಯಲ್ಲ. ನಾನು ಕೇಳಿರುವ ಬೆಲೆಗೆ 1 ನೇ ಪ್ರತಿವಾದಿ ಆಸ್ತಿ ಮಾರಲು ನಿರಾಕರಿಸಿದ್ದಾಳೆ ಎಂದರೆ ಸಾಕ್ಷಿಯು ನಾನು ಮಾರಲು ಕೇಳೆ ಇಲ್ಲ ಎನ್ನುತ್ತಾರೆ.

7. ವಾದಿ ಮತ್ತು 1 ನೇ ಪ್ರತಿವಾದಿ ಮೊದಲು ಚೆನ್ನಾಗೇ ಇದ್ದರೂ ನಂತರ ಈ ಆಸ್ತಿಯ ವಿಚಾರವಾಗಿ ಅವರ ಮದ್ಯೆ ವೈಮನಸ್ಸು ಮೂಡಿದೆ ಎನ್ನುವುದು ನಿಜ. ವಾದಿ ವಿದ್ಯಾಬ್ಯಾಸ ಮಾಡುವಾಗ 1 ನೇ ಪ್ರತಿವಾದಿ ಆತನಿಗೆ ಹಣಕಾಸಿನ ಸಹಾಯ ಮಾಡಿದ್ದಾಳೆ ಎನ್ನುವುದು ಸರಿಯಲ್ಲ. ವಾದಿಗೆ ದಾವಾ ಆಸ್ತಿ

ಮಾರಾಟ ಮಾಡಿ ಹಣ ಸಿಗಲಿಲ್ಲ ಎನ್ನುವ ಕಾರಣಕ್ಕೆ ಈ ಸುಳ್ಳು ದಾವೆ ಹೂಡಿದ್ದಾನೆ ಎನ್ನುವುದು ಸರಿಯಲ್ಲ. ವಾದಿಯ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ವಾದಿಗೆ ನಾನು ಹಣಕಾಸಿನ ಸಹಾಯ ಮಾಡಿ ಆತನ ಕಡೆಯಿಂದ ಈ ದಾವೆ ಹಾಕಿಸಿದ್ದೇನೆ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಮಾತು ಆಸ್ತಿ ಮಾರಾಟ ಮಾಡಲಿಲ್ಲ ಅನ್ನುವ ಕಾರಣಕ್ಕೆ ಸುಳ್ಳು ದಾವೆ ಹಾಕಿಸಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆ:** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**